UASB LIBRARY
Jai Kisan
Newspaper Clippings
Saturday 29-04-2023
Pg. 1

ಮನಸ್ಸಿಗೆ ಚೇತೋಹಾರಿ ವರ್ಟಿಕಲ್ ಗಾರ್ಡನ್





ಪ್ರಾಚೀನ ಕಾಲದ ವಾಸ್ತು ವಿನ್ಯಾಸಗಳಲ್ಲಿ ಬಳಸಲಾಗುತ್ತಿದ್ದ ವರ್ಟಿಕಲ್ ಗಾರ್ಡನ್ ಈಗ ಮತ್ತೆ ಟ್ರೆಂಡಿಂಗ್ ನಲ್ಲಿದೆ.

ಹಸಿರು ಉದ್ಯಾನ ಮನೆಯ ಸುತ್ತ ಸೌಂದರ್ಯ, ಪ್ರಶಾಂತತೆ ಮತ್ತು ಪ್ರಕೃತಿಯ ಸ್ಪರ್ಶ ನೀಡಬಲ್ಲುದು. ಬೆಳೆಯುತ್ತಿರುವ ನಗರಗಳ ಮನೆಗಳಲ್ಲಿ ವಿಶಾಲ ಉದ್ಯಾನ ರಚಿಸುವುದೇ ಒಂದು ದೊಡ್ಡ ಸವಾಲಾಗಿದೆ. ಆದರೆ ಈಗ ಕಡಿಮೆ ಜಾಗಗಳಲ್ಲೂ ಸುಂದರ ಉದ್ಯಾನ ನಿರ್ಮಿಸಬಹುದು ಎಂಬುದನ್ನು ವರ್ಟಿಕಲ್ ಗಾರ್ಡನ್‌ಗಳು ತೋರಿಸಿಕೊಟ್ಟಿವೆ. ಹಸಿರು ಗೋಡೆ ಎಂಬ ಹೆಸರಿನಿಂದಲೂ ಎಲ್ಲೆಡೆ ಮನೆಮಾತಾಗಿರುವ ವರ್ಟಿಕಲ್ ಗಾರ್ಡನ್ ಸರಳ ಮತ್ತು ನೀರಸ ಗೋಡೆಯನ್ನು ಮರೆಮಾಚುವ ಮೂಲಕ ಶಬ್ದ ನಿರೋಧಕವಾಗಿ, ಗಾಳಿಯ ಗುಣಮಟ್ಟ ಹೆಚ್ಚಿಸುವ ಮತ್ತು ತಾಪಮಾನ ನಿಯಂತ್ರಣ ಮಾಡುವ ಮೂಲಕ ಪ್ರಮುಖ ಪಾತ್ರ ವಹಿಸುತ್ತಿದೆ.

ಪ್ರಾಚೀನ ಶೈಲಿ: ವರ್ಟಿಕಲ್ ಗಾರ್ಡನ್‌ಗಳನ್ನು ಪ್ರಾಚೀನ ಕಾಲದ ವಾಸ್ತು ವಿನ್ಯಾಸಗಳಲ್ಲಿ ಕೂಡ ಬಳಸಲಾಗುತ್ತಿತ್ತು. 1920ರ ದಶಕದಿಂದಲೇ ಇದು ಹೆಚ್ಚು ಚಾಲ್ತಿಯಲ್ಲಿದ್ದು, ಈಗ ಇದು ಕಟ್ಟಡದ ಪ್ರವೇಶದ್ವಾರ, ಮನೆಯ ಒಳಾಂಗಣ ಮತ್ತು ಹೊರಾಂಗಣ ರಚನೆಗಳು ಹಾಗೂ ಯಾವುದೇ ತೆರೆದ ಜಾಗಗಳಲ್ಲಿ ನಿರ್ಮಿಸುವಷ್ಟು ಸರಳತೆ ಹೊಂದಿದೆ. ನೀರು ಮತ್ತು ಶಕ್ತಿಯ ಉಳಿತಾಯಕ್ಕೆ ವರ್ಟಿಕಲ್ ಗಾರ್ಡನಿಂಗ್ ಉತ್ತಮ ಮಾರ್ಗವಾಗಿದ್ದು, ಇದು ಸಾಂಪ್ರದಾಯಿಕ ತೋಟಗಾರಿಕೆಗಿಂತ ಹೆಚ್ಚು ಪರಿಣಾಮಕಾರಿಯಾಗಿದೆ. ವರ್ಟಿಕಲ್ ಗಾರ್ಡನ್‌ನ ಕೆಲವು ವಿಧಗಳನ್ನು ಇಲ್ಲಿ ಹೀಗಿದೆ.



ಹಸಿರು ಸಿರಿ

ತೂಗು ಮಡಕೆ: ತೂಗಾಡುವ ಮಡಕೆಗಳ ಹಸಿರು ಸಿರಿಯು ವರ್ಟಿಕಲ್ ಉದ್ಯಾನ ಗೋಡೆಗೆ ಅತ್ಯುತ್ತಮ ಉದಾಹರಣೆಯಾಗಿದೆ. ಜೇಡಿಮಣ್ಣು, ಸೆರಾಮಿಕ್ ಅಥವಾ ಟೆರಾಕೋಟಾ ಮಡಕೆಗಳನ್ನು ಇದಕ್ಕೆ ಬಳಸಬಹುದು. ಸ್ಪೈಡರ್ ಸಸ್ಯ, ಜಾಸ್ಮಿನ್, ವರ್ಬೆನಾ, ರಸಭರಿತ ಸಸ್ಯ, ಜೇಡ್ ಸಸ್ಯ ಮತ್ತು ಪರ್ಪಲ್ ಹಾರ್ಟ್ ಸಸ್ಯ ಈ ಶೈಲಿಗೆ ಉತ್ತಮ ಆಯ್ಕೆಯಾಗಿವೆ.

ಹರ್ಬ್ ಪ್ಯಾಕೆಟ್: ಹಳೆಯ ಗಟ್ಟಿ ಬಟ್ಟೆಗಳಿಗೆ ಅಲ್ಲಲ್ಲಿ ಜೇಬಿನಂಥ ರಚನೆ ಮಾಡಿ, ಅದರಲ್ಲಿ ಮಣ್ಣು ತುಂಬಿಸಿ ಸಸ್ಯಗಳನ್ನು ನೆಡುವುದನ್ನು ಹರ್ಬ್ ಪ್ಯಾಕೆಟ್ ಎನ್ನಲಾಗುತ್ತದೆ. ಇದರಲ್ಲಿ ಹಗುರವಾಗಿರುವ ಹಾಗೂ ಆಕರ್ಷಕ ನೋಟ ಬೀರುವ ಜರಿ ಗಿಡ, ಬಳ್ಳಿ ಮತ್ತು ಗಿಡಮೂಲಿಕೆಗಳನ್ನು ಬೆಳೆಸಬಹುದು.

ಹ್ಯಾಂಗಿಂಗ್ ಬುಟ್ಟಿ: ಬುಟ್ಟಿಗಳನ್ನು ನೇತು ಹಾಕಿ ಅವುಗಳಲ್ಲಿ ವಿವಿಧ ಸಸ್ಯಗಳನ್ನು ನೆಡಲಾಗುವ ಹ್ಯಾಂಗಿಂಗ್ ಗಾರ್ಡನ್‌ಗಳು ಸ್ಪೇಸ್ ಸೇವರ್ ಆಗಿ ಕಾರ್ಯ ನಿರ್ವಹಿಸುತ್ತವೆ. ಗೋಡೆ ಮತ್ತು ಸೀಲಿಂಗ್‌ನಿಂದ ಬುಟ್ಟಿಗಳು ಬೇರ್ಪಟ್ಟಂತೆ ಕಾಣಲು ಇದರಲ್ಲಿ ಹಗ್ಗ ಮತ್ತು ಹುಕ್ ಬಳಸಲಾಗುತ್ತದೆ.

ಗಾರ್ಡನ್ ಫೆನ್ಸ್: ಲಂಬ ಉದ್ಯಾನ ವಿನ್ಯಾಸದಲ್ಲಿ ಫೆನ್ಸ್ ಅಳವಡಿಕೆ ಅತಿ ಪ್ರಮುಖವಾಗಿದೆ. ಇದು ಮಳೆಗಾಡು ಅಥವಾ ಕಾಡಿನಂತಹ ಭವ್ಯ ನೋಟ ನೀಡುತ್ತದೆ. ಟ್ರೆಲ್ಲಿಸ್, ಪ್ಯಾಲೆಟ್ ಪ್ಲಾಂಟರ್ಸ್, ತಂತಿ ಬೇಲಿ ಮತ್ತು ಲ್ಯಾಟಿಸ್ ಬೇಲಿ ಇತ್ಯಾದಿಗಳು ವಿಭಿನ್ನ ವಿನ್ಯಾಸಗಳ ಜತೆಗೆ ಸಣ್ಣ ಜಾಗದಲ್ಲಿ ಉದ್ಯಾನ ಮಾಡಲು ಸೂಕ್ತ ಆಯ್ಕೆಯಾಗಿದೆ.

ಏಣಿಯ ಮರುಬಳಕೆ: ಮನೆಯ ಸುತ್ತ ಬಳಕೆಯಾಗದ ಪೀಠೋಪಕರಣವನ್ನು ವರ್ಟಿಕಲ್ ಗಾರ್ಡನ್ ಡಿಸ್ಪ್ಲೇ ಆಗಿ ಪರಿವರ್ತಿಸಬಹುದು. ಏಣಿಯ ಮೆಟ್ಟಿಲುಗಳು ಕೂಡ ಸೊಗಸಾದ ವರ್ಟಿಕಲ್ ಉದ್ಯಾನವಾಗಿ ಕಾರ್ಯ ನಿರ್ವಹಿಸುತ್ತದೆ. ಏಣಿಯ ವಿನ್ಯಾಸದಲ್ಲಿ ಸಾಕಷ್ಟು ಸಸ್ಯಗಳನ್ನು ಜೋಡಿಸಿಕೊಳ್ಳಲು ಅವಕಾಶಗಳಿವೆ.

ಮೆಟಲ್ ಸ್ಟ್ಯಾಂಡ್: ಲೋಹದ ಸ್ಟ್ಯಾಂಡ್‌ಗಳು ಸ್ಥಿತಿಸ್ಥಾಪಕ ಮತ್ತು ತುಕ್ಕು ನಿರೋಧಕ ಲೇಪನಗಳೊಂದಿಗೆ ಬಹುಕಾಲ ಬಾಳಿಕೆ ಬರುತ್ತವೆ. ಇದನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸುಲಭವಾಗಿ ಸಾಗಿಸಬಹುದು. ಅನೇಕ ಬಣ್ಣಗಳಲ್ಲಿ ಇದು ಲಭ್ಯವಿರುತ್ತವೆ.

ಮರದ ಚಪ್ಪಡಿ: ವಿಶಿಷ್ಟವಾಗಿರುವುದನ್ನು ಪ್ರಯತ್ನಿಸಲು ಆಸಕ್ತಿಯಿದ್ದರೆ ಮರದ ಚಪ್ಪಡಿಗಳನ್ನು ಬಳಸಿ ಲಂಬವಾದ ಉದ್ಯಾನ ಗೋಡೆಗಳನ್ನು ಮಾಡಬಹುದು. ಇದು ಸೂಕ್ಷ್ಮ ಸಸ್ಯಗಳಿಗೆ ಸೂಕ್ತವಾಗಿದೆ.

ಬಹುಮುಖ ಗೋಡೆ: ಈ ಶೈಲಿಯಲ್ಲಿ ಮನೆಯ ಹೊರಗಿನ ಗೋಡೆಯ ಮೇಲೆ ಸಸ್ಯ, ಗಿಡಮೂಲಿಕೆ, ತರಕಾರಿ ಮತ್ತು ಹಣ್ಣು ಇತ್ಯಾದಿಗಳನ್ನು ಒಂದೇ ಜಾಗದಲ್ಲಿ ಬೆಳೆಸಲಾಗುತ್ತದೆ. ಹಣ ಹೂಡಿಕೆ ಮಾಡಲು ಸಿದ್ಧರಿರುವವರಿಗೆ ಇಂಥ ಬಹುಮುಖಿ ಗೋಡೆ ಗಾರ್ಡನ್ ಸೂಕ್ತ. ಇದು ತೋಟಗಾರಿಕೆ ಸ್ಥಳವಾಗಿ, ಗೌಪ್ಯತಾ ಗೋಡೆಯಾಗಿ ಮತ್ತು ಅತಿಥಿಗಳ ಆಕರ್ಷಣೆಯಾಗಿ ಕಾರ್ಯ ನಿರ್ವಹಿಸುತ್ತದೆ.

ಬಣ್ಣದ ಕ್ಯಾನ್: ಕಲರ್‌ಫುಲ್ ಕ್ಯಾನ್‌ಗಳು ಬಜೆಟ್ ಸ್ನೇಹಿ ವರ್ಟಿಕಲ್ ಗಾರ್ಡನ್‌ಗೆ ಅತ್ಯುತ್ತಮ ಉದಾಹರಣೆಯಾಗಿದೆ. ಇದು ಸೊಗಸಾದ ಹೂವು ಮತ್ತು ಗಿಡಮೂಲಿಕೆಗಳನ್ನು ಪ್ರದರ್ಶಿಸುವ ಜತೆಗೆ ಸರಳ ನೋಟ ನೀಡುತ್ತದೆ. ■

29-04-2023
V-karnataka add Pg 04

ಕೃಷಿ ಕ್ಷೇತ್ರದ ಉತ್ತೇಜನಕ್ಕೆ ಆಟೊ ಗ್ರೋ ವ್ಯವಸ್ಥೆ



ವಿಜಯವಾಣಿ ಚಿತ್ರ

ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಶನ್ ಟೆಕ್ನಾಲಜಿ ಸಂಸ್ಥೆಯಲ್ಲಿ ಸ್ಥಾಪಿಸಿರುವ ಆಟೊ ಗ್ರೋ ಲ್ಯಾಬೊರೇಟರಿ ಪ್ರಯೋಗಾಲಯವನ್ನು ದೇವವ್ರತ ದಾಸ್ ಉದ್ಘಾಟಿಸಿದರು. ರಮೇಶ್ ಕೆಸ್ತೂರ್, ಸಿ.ಆರ್.ಅಶ್ವತ್ಥ ಇತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ನಿಖರವಾದ ಕೃಷಿಗೆ ಸಂಬಂಧಿಸಿದಂತೆ ಸ್ವಾಯತ್ತ ಹಸಿರುಮನೆ ವ್ಯವಸ್ಥೆಯನ್ನು ಕಲ್ಪಿಸಿ ಅಂತರ್ಜಾಲ ವಸ್ತು (ಐಒಟಿ) ಆಧಾರಿತ ಡಾಟಾ ಸೆನ್ಸಿಂಗ್ ಸಿಸ್ಟಂ ಅನ್ನು (ಆಟೋ ಗ್ರೊ) ರಚಿಸಲು, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇನ್‌ಫರ್ಮೇಶನ್ ಟೆಕ್ನಾಲಜಿ ಬೆಂಗಳೂರು (ಐಐಐಟಿ-ಬಿ) ಹಾಗೂ ಹೆಸರಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಪರಸ್ಪರ ಒಡಂಬಡಿಕೆ ಮಾಡಿಕೊಂಡಿವೆ.

ಈ ಯೋಜನೆ ಮೂಲಕ ಸಂಪೂರ್ಣ ಸ್ವಯಂಚಾಲಿತ ಹಾಗೂ ಸ್ವಯಂನಿಯಂತ್ರಿತ ಕೃಷಿ ವ್ಯವಸ್ಥೆಯನ್ನು ರಚಿಸಿ ಉದ್ಯಮದಲ್ಲಿ ಹೊಸ ಕ್ರಾಂತಿಯನ್ನುಂಟು ಮಾಡುವ ಗುರಿ ಹೊಂದಲಾಗಿದೆ. ಇದಕ್ಕಾಗಿ ಐಐಐಟಿ-ಬಿ ಸಂಸ್ಥೆಯಲ್ಲಿ ಸ್ಥಾಪಿಸಿರುವ 'ಆಟೊ ಗ್ರೋ ಲ್ಯಾಬೊರೇಟರಿ' ಪ್ರಯೋಗಾಲಯವನ್ನು ಸಂಸ್ಥೆಯ ನಿರ್ದೇಶಕ ಪ್ರೊ. ದೇವವ್ರತ ದಾಸ್ ಉದ್ಘಾಟಿಸಿದರು.

» ಐಐಎಚ್‌ಆರ್-ಐಐಐಟಿಬಿ ಸಹಭಾಗಿತ್ವದಡಿ ಹೊಸ ಲ್ಯಾಬ್ ಉದ್ಘಾಟನೆ

ಈ ವೇಳೆ ಮಾತನಾಡಿದ ಪ್ರೊ. ದಾಸ್, ಐಒಟಿ ಆಧಾರಿತ ದತ್ತಾಂಶ ಸಂವೇದನಾ ವ್ಯವಸ್ಥೆ ಹಾಗೂ ಕೃತಕ ಬುದ್ಧಮತ್ತೆ/ಮಷಿನ್ ಲರ್ನಿಂಗ್ ತಂತ್ರಗಳು, ದತ್ತಾಂಶಗಳ ಆಧಾರದ ಮೇಲೆ ನೈಜ ಸಮಯದ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ. ಇದರಿಂದ ಬೆಳೆ ಇಳುವರಿ ಹಾಗೂ ಸಂಪನ್ಮೂಲ ಬಳಕೆಯನ್ನು ಉತ್ತಮಗೊಳಿಸಲು ಆಟೋ ಗ್ರೋ ವ್ಯವಸ್ಥೆಗೆ ಅನುಕೂಲ ಮಾಡಿಕೊಡುತ್ತವೆ. ಭವಿಷ್ಯದಲ್ಲಿ ಆಹಾರ ಭದ್ರತೆ, ಸುಸ್ಥಿರತೆ ಖಾತ್ರಿಪಡಿಸುವಲ್ಲಿ ಈ ವ್ಯವಸ್ಥೆಯು ನಿರ್ಣಾಯಕ ಪಾತ್ರ ವಹಿಸಲಿದೆ ಎಂದರು.

3 ವಿಭಿನ್ನ ಸಂರಚನೆ ಹೊಂದಿರುವ ವ್ಯವಸ್ಥೆ: ಯೋಜನೆಯ ಪ್ರಧಾನ ವಿಚಕ್ಷಣಾಧಿಕಾರಿ ಡಾ.ರಮೇಶ್ ಕೆಸ್ತೂರ್ ಮಾತನಾಡಿ, ಸಂಶೋಧನೆ ಮಾಡುತ್ತಿರುವ ಹೊಸ ವಿಧಾನವು ಹೈಡ್ರೋಪೋನಿಕ್ಸ್, ಓಪನ್ ಗ್ರೋ ಫಾರ್ಮಿಂಗ್ ಹಾಗೂ ವರ್ಟಿಕಲ್ ಸೆಟಪ್ ಎಂಬ 3 ವಿಭಿನ್ನ ಸಂರಚನೆಯನ್ನು ಹೊಂದಿದೆ. ಸೆನ್ಸರ್ ಸಿಸ್ಟಂ ಹಾಗೂ ಕೃತಕ ಬುದ್ಧಮತ್ತೆ/ಮಷಿನ್ ಲರ್ನಿಂಗ್ ತಂತ್ರಗಳ ಮಾದರಿ ನಿಯೋಜಿಸುವ ಗುರಿ ಇದೆ ಎಂದರು.

ಆಟೊ ಗ್ರೋ ಯೋಜನೆಯು ಎಐ/ಎಂಎಲ್ ಮಾದರಿಯಡಿ ನೋವೆಲ್ ವಿಕ್ ಇರಿಗೇಶನ್ ವ್ಯವಸ್ಥೆ ಬಳಸಿಕೊಂಡು ಫಾರ್ಮ್ ಅನ್ನು ನಿಯಂತ್ರಿಸಲು ಸ್ವಯಂ ನಿರ್ಧಾರ ಕೈಗೊಳ್ಳುವಂತೆ ಮಾಡುತ್ತದೆ. ಸಾಂಪ್ರದಾಯಿಕ ಹನಿ ನೀರಾವರಿ ಪದ್ಧತಿಗೆ ಹೋಲಿಸಿದರೆ ಈ ವ್ಯವಸ್ಥೆಯು ಶೇ. 60 ನೀರು ಉಳಿತಾಯವಾಗಲಿದೆ.
| ಡಾ. ಸಿ.ಆರ್. ಅಶ್ವತ್ಥ ಐಐಎಚ್‌ಆರ್ ಪ್ರಧಾನ ವಿಜ್ಞಾನಿ

29-04-2023
Vijayavani add Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in